ಆಡುವುದು ಹೇಗೆಂದು ಯೋಚಿಸಿದ. ತನ್ನೂರಿನವರು ಆಡುತ್ತಿದ್ದ ರಾಮಾಯಣ ನಾಟಕದಲ್ಲಿ ರಾವಣ ರಂಗದ ಮೇಲೆ ಕುಣಿಯುತ್ತ ಬರುತ್ತಿದ್ದುದು ನೆನಾಯಿತು. ಆ ಪಾತ್ರಧಾರಿಯ ಹೆಜ್ಜೆ ಹೆಜ್ಜೆಯನ್ನೂ ನೆನಪಿಸಿಕೊಂಡು ಕುಣಿಯತೊಡಗಿದ.

ಕತೆಗಾರ ನೆನೆಯುತ್ತ ಕುಣಿಯುತ್ತಿದ್ದ. ಕುಣಿಯುತ್ತ ನೆನೆಯುತ್ತಿದ್ದ. ತನ್ನ ಹೆಜ್ಜೆ ನಾದವನ್ನು ಕೇಳಿಸಿಕೊಂಡ. ತಕ್ಕ ಕಿಟ ತಕ್ಕ ಕಿಟ ತಕಧಿಮಿ. ಈ ವರಸೆ ಬೇಡವೆನಿಸಿತು. ಜಗ್ಗು ನಕನಕ ಜಗ್ಗು ನಕನಕ ನಾ ಎಂದು ಕೊಂಚ ಹೊತ್ತು ಹೆಜ್ಜೆ ಹಾಕಿದ. ವೇಗ ಸಾಲದೆನಿಸಿತು. ಜಗ್ಗುಜಗ್ಗು ನಕನಕ ಜಗ್ಗುನಾ ಆಹಾ ನಕ್ಕನಾ ನಕನಕ. ಇದು ಮನಸ್ಸಿಗೆ ಉತ್ಸಾಹ, ಉಲ್ಲಾಸ ತಂದಿತು. ಜೋರಾಗಿ ಹೇಳಿಕೊಂಡು ಕುಣಿದ. ಕುಣಿಯುತ್ತಿದ್ದ.

ಕುಣಿಯುತ್ತಿದ್ದ. ಸ್ವಲ್ಪ ದೂರದಲ್ಲಿ, ಕೂಗಳತೆಯಷ್ಟೇ ಹತ್ತಿರದಲ್ಲಿ ಹೊಂಗೆ ಮರದ ಆಶ್ರಯದಲ್ಲಿ ನಿಂತಿದ್ದ ಹುಡುಗರು ಈ ದೃಶ್ಯದಿಂದ ಉತ್ತೇಜಿತರಾದರು. ಶಿಳ್ಳೆ ಹೊಡೆದರು. ಅದೇ ಮಳೆ, ಹಾಗೆಯೇ ಮಳೆ.

ಕುಣಿಯುತ್ತಲೇ ಕತೆಗಾರ ಕೈ ಸನ್ನೆ ಮಾಡಿ ಅವರನ್ನು ಕರೆದ. ಹುಡುಗರು ಅಂಗಿ ಕಳಚಿ, ತಮ್ಮ ಆನಂದದ ಕುರುಹಾಗಿ ಮೇಲೆತ್ತಿ ತಿರುಗಿಸುತ್ತ ನೆನೆಯುತ್ತ ಓಡೋಡಿ ಬಂದರು. ಮಳೆ ನಿಲ್ಲುವ ಸೂಚನೆ ಕೊಡದೆ ಸುರಿಯುತ್ತಿತ್ತು.

ಕತೆಗಾರ ಜಗ್ಗುನಕ ಅಂದ. ಹುಡುಗರೂ ಅಂದರು. ಹುಲಿವೇಷದವರಂತೆ ನೀರಿನಲ್ಲಿ ಹೆಜ್ಜೆ ಹಾಕಿದ. ನೀರು ಹುಡುಗರ ಮೇಲೆ ಸಿಡಿಯಿತು. ಅವರು ಹಾಹೂ ಎಂದು ಕೂಗಿ ಕುಣಿದರು. ಹುಚ್ಚು ಕುಣಿತ ಕುಣಿದರು. ಕತೆಗಾರನಿಗೂ ಆ ಹುಚ್ಚು ಏರಿತು. ದೊಡ್ಡಾಟದವರಂತೆ ಕುಣಿದ. ಕಾಮನ ಹುಣ್ಣಿಮೆಯ ಓಕುಳಿ ಕುಣಿತದಂತಿದೆ ಅನ್ನಿಸಿತು. ಮಳೆ ಕೊಂಚವೇ ಕೊಂಚ ಲಯ ಬದಲಿಸಿ ಸುರಿತ ಮುಂದುವರೆಸಿತು.

ಮಳೆಯ ಹನಿಗೆ ತೊಯ್ದು ಭಾರಕ್ಕೆ ಪಯಣ ನಿಂತು ಹುಲ್ಲಿನ ಆಸರೆಪಡೆದು ಅದನ್ನು ಕವುಚಿ ಕುಳಿತ ಒಂಟಿ ಎಕ್ಕದಬಿತ್ತ. ಅದು ಇಲ್ಲಿ ಮೊಳೆಯಲಿ, ಬೀಸಿಲು ಕಾದು ಹಗುರಾಗಿ ಹಾರಿ ತನ್ನ ಭಾಗ್ಯವಿದ್ದಲ್ಲಿ ಮೊಳೆತು ಗಿಡವಾಗಲಿ ಎಂದು ಹಾರೈಸಿದ.

ಮಳೆ ಯಕ್ಷಿಣಿಯೆ? ಕೆರೆಯಂಗಳದ ಹಿಂದಂಚಿನ ಗದ್ದೆಗಳ ಮೇಲೆ ಮಳೆ. ಗಗನ ವಿಹಾರಿ ದಿವಿ ಸುಂದರಿಯ ಗುಂಗಟ ಅವಳ ಅಂಕೆ ತಪ್ಪಿ ಇಲ್ಲಿಗಿಳಿತಂದಂತೆ ಹಸುರಿಗೆ ತೆಳು ಬಿಳಿಯ ಮುಸುಕು. ಗದ್ದೆಗಳ ಕಿರು ಬದುಗಳ ಮೇಲೆ ಓಡುವ ಆಸೆ ಮೊಳೆಯಿತು. ಅತ್ತ ಓಡಿದ. ಅವನ ಬೆನ್ನಲ್ಲಿ ಹುಡುಗರ ದೌಡು. ತನ್ನೆರಡು ಕೈಗಳನ್ನು ಹಕ್ಕಿಯ ರೆಕ್ಕೆಗಳಂತೆ ಚಾಚಿ ಓಡಿದ. ಹುಡುಗರ ಕೈಗಳೂ ಹಕ್ಕಿರೆಕ್ಕೆಗಳಾದವು.

ಹಸುರಿಗೆ ಮಳೆ ಹೊದೆಸಿದ ಬಿಳಿ ಮುಸುಕನ್ನು ಸೀಳಿಕೊಂಡು ಓಡುವ ಹುಡುಗರನ್ನು ನಿಂತು ನೋಡಬೇಕೆಂಬ ಆಸೆ ಕತೆಗಾರನದಾಯಿತು. ನಿಂತ. ಹುಡುಗರು ನಿಂತರು. ಆಯಾಸದ ನಟನೆಯಲ್ಲಿ ಕಳ್ಳ ಏದುಸಿರು ಬಿಟ್ಟ. ನೀವು ಓಡಿ. ಒಂದೆರಡು ನಿಮಿಷ ಸುಧಾರಿಸಿಕೊಂಡು ನಿಮ್ಮ ಜೊತೆ ಸೇರಿಕೊಳ್ಳುತ್ತೇನೆ ಎಂದ. ಹುಡುಗರು ನಂಬಿದರು. ಓಡತೊಡಗಿದರು. ಅವನು ಒಂದೆರಡು ನಿಮಿಷವಲ್ಲ, ಐದಾರು ನಿಮಿಷಗಳ ಕಾಲ ನಿಂತು ಮೈ ಮರೆತು ನೋಡಿದ. ಗದ್ದೆಗಳ ಮೇಲೆ, ಹುಡುಗರ ಮೇಲೆ ಮಳೆ ಸುರಿಯುತ್ತಿತ್ತು. ಹುಡುಗರ ಮೇಲೂ ಮಳೆಯ ತಣ್ಣೆಯ ಬಿಳಿ ಹೊದಿಕೆ.

ಹುಡುಗರು ನಿಂತರು. ಹಿಂದಿರುಗಿ ನೋಡಿದರು. ಅವನದು ಕಳ್ಳಾಟ ಅನ್ನಿಸಿತು. ತಮ್ಮ